**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 1061/2021 CW-4 PW-6**

**ಸಾಕ್ಷಿಯನ್ನು ದಿಃ 07.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಸ್ವಾಮಿ |
| ತಂದೆಯ ಹೆಸರುಃ | ರಂಗೇಗೌಡ |
| ವಯಸ್ಸುಃ | 45 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಮಲ್ಲವನ ಘಟ್ಟ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ಹೆಂಡತಿ. ಆರೋಪಿ ನನ್ನ ತಮ್ಮ.

ಸುಮಾರು 4 ವರ್ಷಗಳ ಹಿಂದೆ ಸಂಜೆ 4.00 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ಆರೋಪಿಯ ನಡುವೆ ಕರೆಂಟ್ ಲೈನ್ ವಿಚಾರವಾಗಿ ನಮ್ಮ ಬಳಿ ಗಲಾಟೆ ಆಗಿದ್ದು, ನಾನು ತೋಟದಿಂದ ಬರುವಷ್ಟರಲ್ಲಿ ಚಾಸಾ-1 ರವರ ತಲೆಗೆ ರಕ್ತಗಾಯವಾಗಿತ್ತು. ವಿಚಾರಿಸಿದಾಗ ಆರೋಪಿ ಕರೆಂಟ್ ಲೈನ್ ವಿಚಾರವಾಗಿ ಜಗಳ ತೆಗೆದು ದೊಣ್ಣೆಯಿಂದ ಚಾಸಾ-1 ರವರ ತಲೆಗೆ ಹೊಡೆದಿರುವುದಾಗಿ ತಿಳಿಸಿದರು. ನಂತರ ನಾನು ಚಾಸಾ-1 ರವರನ್ನು ಚನ್ನರಾಯಟಣ್ಣದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿರುತ್ತೇನೆ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಡಿ ಕೆ ಎಂ ರವರಿಂದ ಃ**

ನಾನು ಬೆಳಗ್ಗೆ 8.00 ಗಂಟೆಗೆ ತೋಟಕ್ಕೆ ಹೋಗಿದ್ದು ಮಧ್ಯಾಹ್ನ 1.00 ಗಂಟೆಗೆ ಊಟಕ್ಕೆ ಮನೆಗೆ ಬಂದಿರುತ್ತೇನೆ. ನಾನು ಮನೆಯ ಬಳಿ ಹೋದಾಗ ಆರೋಪಿ ನಮ್ಮ ಮನೆಯ ಬಳಿ ಇದ್ದರು. ಘಟನಾ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಚಾಸಾ-1 ರವರನ್ನು ಆಟೋದಲ್ಲಿ

ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-1 ರವರು ಆಸ್ಪತ್ರೆಯಲ್ಲಿ 2 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನ್ನ ಮತ್ತು ಆರೋಪಿಯನಡುವೆ ಜಮೀನು ವಿಚಾರವಾಗಿ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಗಲಾಟೆ ದಿನಾಂಕವನ್ನು ನಿಖರವಾಗಿ ಹೇಳಲಾಗುವುದಿಲ್ಲ. ನಾನು ಮತ್ತು ಚಾಸಾ-1 ರವರು ಷರೀಕ್ಕಾಗಿ ಆರೋಪಿಗೆ ತೊಂದರೆ ನೀಡಲು ಅವರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**